# ತತ್ವಪದ ಸಾಹಿತ್ಯದಲ್ಲಿ ಸಾಂಸ್ಕೃತಿಕ ನೆಲೆಗಳು

**ಆಶಾಲತಾ**

ಸಂಶೋಧನಾ ವಿದ್ಯಾರ್ಥಿ, ಡಾ. ಎಂ. ಚಿದಾನಂದಮೂರ್ತಿ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ.

DOI: https://doi.org/10.5281/zenodo.15795578

## ABSTRACT:

ತತ್ವಪದ ಸಾಹಿತ್ಯವು ಕನ್ನಡ ಸಾಹಿತ್ಯಕ್ಕೆ ಮಹತ್ವದ ಕೊಡುಗೆಯನ್ನು ನೀಡಿದೆ. ಗಗನಕುಸುಮವಾಗಿದ್ದ ಸಾಹಿತ್ಯವನ್ನು ಜನಸಾಮಾನ್ಯರ ನಡುವೆ ತಂದ ಕೀರ್ತಿ ತತ್ವಪದಕಾರರದ್ದಾಗಿದೆ. ಅತೀತ ಬದುಕು ಬದುಕಿದ ತತ್ವಪದಕಾರರು ತಾವು ಕಂಡ ಅನುಭವವನ್ನು ಹೃದ್ವೇದ್ಯವಾಗುವ ವಿಶಿಷ್ಟ ರೀತಿಯ ತತ್ವಪದಗಳಲ್ಲಿ ಕಾಣಿಸಿದರು. ಸಾರ್ವಕಾಲಿಕ ಮಾನವೀಯ ಮೌಲ್ಯಗಳಾದ ಸತ್ಯ, ಅಹಿಂಸೆ, ದಯೆ, ಕರುಣೆ, ಅನುಕಂಪ, ಸಮಾನತೆ, ಸಹಕಾರ, ಜಾತ್ಯಾತೀತ, ಕಾಯಕ, ದಾಸೋಹ ಇತ್ಯಾದಿಗಳು 12ನೇ ಶತಮಾನದಿಂದ ಇವತ್ತಿನವರೆಗೂ ಹೊಸ ರೂಪ ಪಡೆದು ಸಮಕಾಲೀನತೆ ಪಡೆದುಕೊಂಡಿದೆ.

## KEYWORDS:

ತತ್ವಪದ, ಕಾಯಕವೇ ಕೈಲಾಸ, ಸಂಸ್ಕೃತಿ, ಭಕ್ತಿ, ಮೌಲ್ಯಗಳು.

ತತ್ವಪದಕಾರರಲ್ಲಿ ನಾವು ಮುಖ್ಯವಾಗಿ ಕಾಣುವುದು ಅಪಾರವಾದ ಅನುಕಂಪ, ಜಗತ್ತನ್ನು ದುಃಖ ದುಮ್ಮಾನಗಳಿಂದ ಮುಕ್ತಗೊಳಿಸುವುದು, ದೀನದಲಿತರನ್ನು ಜೊತೆಗೆ ಹೀನರನ್ನು ತಮ್ಮ ತೋಳು ತೆಕ್ಕೆಗೆ ಆಗುಮಾಡಿಕೊಳ್ಳುವ ಆತ್ಮೀಯತೆ, ಸ್ವತಂತ್ರ ವೈಚಾರಿಕ ದೃಷ್ಟಿಕೋನ, ಸಮಾಜ ವಿಮರ್ಶೆ, ಲೋಕ ವಿಮರ್ಶೆ, ಲೋಕ ಕಾರುಣ್ಯ, ಸಮಾಜವನ್ನು ಮುರಿದು ಕಟ್ಟುವ, ತಿದ್ದುವ ದಿಟ್ಟತನ, ಸತ್ಯ ಸ್ವರೂಪದ ಸಾಕ್ಷಾತ್ಕಾರವನ್ನು ಪಡೆಯುವ ಅಂತರ್ ದೃಷ್ಟಿ, ಕವಿ ಹೃದಯದ ಭಾವನೆಯ ಆವೇಗ, ಅದನ್ನು ಅಭಿವ್ಯಕ್ತಗೊಳಿಸುವ ಕಾವ್ಯಶಕ್ತಿ ಮೊದಲಾದ ಬಹುಮುಖ ಪ್ರತಿಭೆಯಿಂದ ಅವರ ವ್ಯಕ್ತಿತ್ವ ಸಮನ್ವಿತವಾದುದಾಗಿದೆ. ಹಾಗಾಗಿಯೇ ಇದು ಪಾಮರರನ್ನು, ಸಾಧಕರನ್ನು ಆಕರ್ಷಿಸಲು ಸಾಧ್ಯವಾಯಿತು. ಇವರ ನೇತೃತ್ವದಲ್ಲಿ ಶರಣ ಸಂಸ್ಕೃತಿಯ ಉದಾತ್ತ ಚಿತ್ರಗಳನ್ನು ಬಿತ್ತರಿಸಲು ಸಾಧ್ಯವಾಯಿತು. ಇವರ ನೇತೃತ್ವದಲ್ಲಿ ಶರಣ ಸಂಸ್ಕೃತಿಯ ಉದಾತ್ತ ಚಿತ್ರಗಳನ್ನು ಬಿತ್ತರಿಸಲು ಸಾಧ್ಯವಾಯಿತು. ಬಸವಣ್ಣನವರ ಸಪ್ತಾಕ್ಷರ ಮಂತ್ರವಿರುವ ವಚನ ಇಡೀ ತತ್ವಪದ ಸಾಹಿತ್ಯಕ್ಕೆ ಪ್ರೇರಣೆಯಾಯಿತು.

**‘ಕಳಬೇಡ ಕೊಲಬೇಡ, ಹುಸಿಯ ನುಡಿಯಲು ಬೇಡ**
**ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ**

**ತನ್ನ ಬಣ್ಣಿಸಬೇಡ, ಇದರ ಹಳಿಯಲು ಬೇಡ**
**ಇದೆ ಅಂತರಂಗ ಶುದ್ಧಿ, ಇದೆ ಬಹಿರಂಗ ಶುದ್ಧಿ**
**ಇದೇ ನಮ್ಮ ಕೂಡಲಸಂಗಮ ದೇವರನೊಲಿಸುವ ಪರಿ'**

ಇದರಲ್ಲಿ ಬಹುಮುಖ್ಯವಾದ ಏಳು ತತ್ವಗಳಿವೆ. ಮನುಷ್ಯ ಬದುಕಿನ ಅತ್ಯಾವಶ್ಯಕವಾದ ನೈತಿಕ ತತ್ವಗಳನ್ನು ಸೂತ್ರ ಪ್ರಾಯವಾಗಿ ತಿಳಿಸಿದ್ದಾರೆ. ಕಳ್ಳತನ ಮಾಡದೆ ಇರುವುದು, ಕೊಲೆ ಮಾಡದಿರುವುದು, ಸಿಟ್ಟಾಗದಿರುವುದು, ಅನ್ಯರ ಬಗ್ಗೆ ಅಸಹ್ಯ ಪಡದಿರುವುದು, ತಮ್ಮನ್ನೇ ತಾವು ಹೊಗಳಿಕೊಳ್ಳುವುದು, ಇನ್ನೊಬ್ಬರನ್ನು ಜರಿಯದೆ ಇರುವುದು. ಈ ತತ್ವಗಳನ್ನು ಜೀವನದಲ್ಲಿ ರೂಢಿಸಿಕೊಂಡರೆ ಅದೇ ಅಂತರಂಗ ಶುದ್ಧಿ ಮತ್ತು ಬಹಿರಂಗ ಶುದ್ಧಿಯಾಗಿದೆ. ಸಮಕಾಲೀನ ಸಂಕೀರ್ಣ ಸಮಾಜದಲ್ಲಿರುವ ನಾವು ಈ ವಚನವನ್ನು ಪಚನ ಮಾಡಿಕೊಳ್ಳಬೇಕಿದೆ. ಜೊತೆಗೆ ಅನಿವಾರ್ಯವೂ ಆಗಿದೆ. ಇದು ಅಂತರಂಗದ ಪರಿಶುದ್ಧತೆಯೇ ಸಕಲ ಸಾಧನೆಗಳ ಮೂಲ ಎಂಬುದನ್ನು ಈ ವಚನ ತಿಳಿಸುತ್ತದೆ. ಆದರೆ ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಬದುಕಿನ ನೈತಿಕ ಮೌಲ್ಯಗಳೇ ಗಾಳಿಗೆ ತೂರಲ್ಪಟ್ಟಿರುವ ವ್ಯವಸ್ಥೆ ನಮ್ಮ ಮುಂದಿದೆ. ಆ ವ್ಯವಸ್ಥೆಯ ವ್ಯಂಗ್ಯವನ್ನು ಈ ವಚನ ಧ್ವನಿಸುತ್ತದೆ. ಬಸವಣ್ಣನವರ ಮತ್ತು ಇತರ ಶರಣರ ನಡೆ-ನುಡಿಯ ಸಮನ್ವಯದ, ಸಾಮರಸ್ಯದ, ಸಂಸ್ಕೃತಿಯ ವಚನಗಳ ಪ್ರಭಾವ ಎಲ್ಲ ತತ್ವಪದಕಾರರ ಮೇಲೆ ಬೀರಿದೆ. ನುಡಿನಡೆಯು ಭಾವ ಶುದ್ಧವಾದ ಹಾರೈಕೆಯಷ್ಟೇ ಮುಖ್ಯವಾದದ್ದು. ತತ್ವಪದಕಾರರು ಶರಣರಂತೆ ನುಡಿದಂತೆ ನಡೆದು ತೋರಿಸಿದರು. ನಡೆ-ನುಡಿಯಲ್ಲಿ ಎಳ್ಳಷ್ಟು ಕುಂದಾದೀತು ಎಂದು ದೈವ ಸಾಕ್ಷಿಯಾಗಿ ಪ್ರಮಾಣ ಮಾಡಿದರು. ಶರಣರ ತತ್ವಾದರ್ಶಗಳನ್ನು ಹೆಜ್ಜೆ ಹೆಜ್ಜೆಗೂ ಜೀವನ ಪರ್ಯಂತ ಚಾಚು ತಪ್ಪದೇ ಪರಿಪಾಲಿಸಿದರು. ಶರಣರು ಮತ್ತು ತತ್ವಪದಕಾರರ ದೃಷ್ಟಿಯಲ್ಲಿ ನಡೆ-ನುಡಿ ಎಂಬ ದ್ವೈತ ಭಾವವಿಲ್ಲ. ನಡೆಯೇ ನುಡಿ, ನುಡಿಯೇ ನಡೆ ಎಂಬ ಅದ್ವೈತ ರೂಪಕದಂತೆ ಬಾಳಿ ಬದುಕಿದವರು. ಜೊತೆಗೆ ಬದುಕಲು ತಿಳಿಸಿದರು. 'ನುಡಿದ ನುಡಿ ನಡೆಯಲಿ ಬದುಕಿದರು. ತಪ್ಪಿದರೆ ಅಂಗೈಯಲ್ಲಿರುವ ಲಿಂಗವೇ ಘಟಸರ್ಪ' ಎಂಬ ವ್ಯಾಖ್ಯಾನದಂತೆ ಬದುಕಿದರು.

ತತ್ವಪದಕಾರರು ಮನುಷ್ಯರಲ್ಲಷ್ಟೇ ಅಲ್ಲ ಸಕಲ ಜೀವಿಗಳಿಗೂ ಲೇಸನ್ನು ಬಯಸಿದರು. ಅನನ್ಯ ಜೀವನ ಪ್ರೀತಿಯನ್ನು ಸಾರಿದರು. ಜೀವಸ್ಪಂದನವನ್ನು ಗುರುತಿಸಿದರು. ಅವರು ಬೋಧಿಸಿದ ಪ್ರೀತಿ, ದಯೆ, ಅನುಕಂಪ, ಮಾನವೀಯತೆಯ ಅಂಶಗಳು ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿ ಸಾಂಸ್ಕೃತಿಕ ಅನನ್ಯತೆಯನ್ನು ಮೆರೆದರು. ಶರಣರು ಸಾರಿದ ಕಾಯಕ ಮತ್ತು ದಾಸೋಹ ತತ್ವಗಳನ್ನು ಅನುಷ್ಠಾನಕ್ಕೆ ತಂದರು. ಪ್ರತಿಯೊಬ್ಬರು ಕಾಯಕ ಮಾಡಬೇಕು, ದುಡಿದು ಉಣ್ಣಬೇಕು, ಪ್ರತಿಫಲವನ್ನು ಅಷ್ಟೇ ಬಯಸಬೇಕು. ಕಾಯಕದಲ್ಲಿ ಶ್ರೇಷ್ಠ ಕನಿಷ್ಠ ಎಂಬ ಭೇದವಿಲ್ಲ. ತತ್ವಪದಕಾರರು ಸಹ ಶಿವ ಸಾಕ್ಷಾತ್ಕಾರವನ್ನು ಕಾಣಬಯಸಿದರು. 'ಕಾಯಕವೇ ಕೈಲಾಸ' ಎಂಬ ತತ್ವ

ಪುನಃ ಸ್ಥಾಪನೆಯಾಯಿತು. ಕಾಯಕ ಎಂಬ ಮಾತು ಮತ್ತು ಅದರ ಅರ್ಥ ಕಲ್ಪನೆಗೆ ಇನ್ನಷ್ಟು ಇಂಬು ದೊರೆಯಿತು. ಕಾಯಕ ಮತ್ತು ದಾಸೋಹ ತತ್ವದಲ್ಲಿ ಅವರು ಕಂಡಿರುವ ಆದರ್ಶ ಮತ್ತು ಅರ್ಥ ವ್ಯಾಪ್ತಿ ಇಡೀ ವಿಶ್ವವನ್ನು ಒಳಗೊಳ್ಳುವಂಥವುಗಳಾಗಿವೆ.

ತತ್ವಪದಕಾರರ ಸಾಂಸ್ಕೃತಿಕ ಅನನ್ಯತೆಯ ಹುಡುಕಾಟದ ಹಿಂದೆ ತಾತ್ವಿಕ ನೆಲೆಯ ಮೀಮಾಂಸೆಯೊಂದರ ಜಿಜ್ಞಾಸೆ ಇದೆ. ಈ ನೆಲದ ಅಸ್ಮಿತೆಯಾಗಿರುವ ತತ್ವಪದ ಸಾಹಿತ್ಯವನ್ನು ವಿಸ್ಮೃತಿಗೆ ಒಳಪಡಿಸುವ ಸಂಭ್ರಮ ಈ ಹಿಂದೆ ಕಂಡಿದ್ದೇವೆ. ಉತ್ತರದ ಸಂಸ್ಕೃತಿಯನ್ನು ರೂಢಿಸಿಕೊಂಡ ಅನೇಕ ಚಿಂತಕರು ನಮ್ಮಲ್ಲಿದ್ದಾರೆ. ಈ ಸಂಸ್ಕೃತಿ ನೆಲಮೂಲ ಸಂಸ್ಕೃತಿಯನ್ನು ಅವಮಾನಿಸುತ್ತಲೇ ಬಂದಿದೆ. ಅದು ಇಂದಿಗೂ ಎಲ್ಲ ರೀತಿಯ ಅಧಿಕಾರ ಕೇಂದ್ರಗಳನ್ನು ತನ್ನ ಪ್ರಭುತ್ವದ ಹಿಡಿತದಲ್ಲಿ ಇಟ್ಟುಕೊಂಡು ಬಂದಿದೆ. ಇವತ್ತಿಗೂ ನೆಲಮೂಲ ಸಂಸ್ಕೃತಿ ಸಾಹಿತ್ಯದೊಳಗೆ ನುಸುಳಬಾರದೆಂದು ಕೆಳವರ್ಗದ ವಚನಕಾರರಾದ ಡೋಹರ ಕಕ್ಕಯ್ಯ, ಮಾದರ ಚೆನ್ನಯ್ಯ, ಅಂಬಿಗರ ಚೌಡಯ್ಯ, ಅಲ್ಲಮ, ಸೂಳೆ ಸಂಕವ್ವೆ, ಕಡಕೋಳ ಮಡಿವಾಳಪ್ಪ, ಶಿಶುನಾಳ ಶರೀಫ, ನಾಗಲಿಂಗ, ರಾಂಪುರದ ಬಕ್ಕಪ್ಪ, ಹಾಗಲವಾಡಿ ಮುದ್ದು ವೀರಸ್ವಾಮಿ, ಬಂಡೆಗುರು, ಗಟ್ಟಿಹಳ್ಳಿ ಅಂಜನಪ್ಪ, ಹಾರಕೂಡ ಚೆನ್ನಬಸವ ಶಿವಯೋಗಿ, ಕೆಸ್ತೂರದೇವ, ಚೆನ್ನೂರ ಜಲಾಲಸಾಬ, ಖೈನೂರ ಕೃಷ್ಣಪ್ಪ, ಶಿರಗಾಪುರದ ಬಂಡೆಪ್ಪ, ಗೊಬ್ಬೂರು ಹಂಪಣ್ಣ, ಮರಕುಂದಿ ಬಸವಣ್ಣಪ್ಪ, ನೀರಲಕೇರಿ ಬಸವಲಿಂಗ ಶರಣ, ಕೈವಾರ ನಾರಾಯಣ ತಾತ ಮೊದಲಾದ ತತ್ವಪದಕಾರರನ್ನು ಗುಲ್ಬರ್ಗದ ಖ್ವಾಜಾ ಬಂದಾನವಾಜ, ಕಲಾದಗಿಯ ಶರೀಫುದ್ದೀನ್ ಬಾಬಾ, ಹುಸನಾ ಖಾದ್ರಿ ಜಗದ್ಗುರು, ಯಮನೂರಪ್ಪ ಅಥವಾ ರಾಜಾಬಾಗ ಸವಾರ್, ಬಿಜಾಪುರದ ಖ್ವಾಜಾ ಅಮೀನುದ್ದಿನ್, ಶಿರಹಟ್ಟಿಯ ಫಕೀರಸ್ವಾಮಿ ಮೊದಲಾದವರನ್ನು ಇವತ್ತಿಗೂ ಹೊರಗಿಟ್ಟೇ ಮಾತನಾಡುತ್ತಾರೆ. ವಚನಗಳನ್ನು, ತತ್ವಪದಗಳನ್ನು ಸೂಫಿಧಾರೆಗಳೆಲ್ಲವನ್ನು ಒಂದೇ ನೆಲೆಯಲ್ಲಿ ವಿವರಿಸಲಾಗದು. ಕನ್ನಡದ ಬದುಕಿಗೆ ಅವಶ್ಯವಾಗಿರುವ ಬಹುತ್ವ ತತ್ವವನ್ನು ಇಲ್ಲಿ ಪ್ರತಿಫಲಿತವಾಗುತ್ತಿದೆ. ಇವರ ಬಂಡಾಯದ ದನಿಗಳನ್ನು ಹೊರಗೆ ನಿಲ್ಲಿಸಿ ಪ್ರಭುತ್ವಕ್ಕೆ ಒಪ್ಪಿಗೆಯಾದ ಪದಗಳಿಗೆ ಮಾತ್ರ ಕಾವ್ಯಸ್ಥಾನವನ್ನು ಕೊಟ್ಟಿರುವುದು ಕಾಣುತ್ತೇವೆ. ಪ್ರಭುತ್ವಕ್ಕೆ ಉಳಿಯ ಪೆಟ್ಟು ಕೊಟ್ಟ ಇವರ ವೈಚಾರಿಕ ದಿಗ್ದರ್ಶನವನ್ನು ಅಂಚಿಗೆ ತಳ್ಳಲಾಗಿದೆ. ಪ್ರಭುತ್ವವನ್ನು ವಿರೋಧಿಸಿದ ವಚನಗಳಾಗಲಿ, ಜನಪದ ಕಾವ್ಯಗಳಾಗಲಿ, ತತ್ವಪದಗಳಾಗಲಿ ಕಾವ್ಯವೆಂದು ಪರಿಗಣಿಸಲೇ ಇಲ್ಲ. ಶ್ರಮಣಧಾರೆ ಪರಂಪರೆಯಿಂದ ಬಂದ ತತ್ವಪದ ಮೀಮಾಂಸೆಗೆ ಪ್ರಭುತ್ವದ ಕೇಂದ್ರಗಳೆಂದೂ ಮನ್ನಣೆ ನೀಡಲಿಲ್ಲ.

ಲೌಕಿಕದ ಜಗತ್ತನ್ನು, ಇಂದ್ರಿಯಗಮ್ಯ ಅನುಭವವನ್ನು ವಚನಕಾರರಾಗಲಿ, ತತ್ವಪದಕಾರರಾಗಲಿ ಮತ್ತು ಸೂಫಿಗಳಾಗಲಿ ನಿರಾಕರಿಸಿಲ್ಲ. ಪ್ರತಿಯೊಂದು ಜೀವಿಯ

ಅಸ್ತಿತ್ವ ಸಾಕಾರಗೊಳ್ಳುವುದೇ ಇಂದ್ರಿಯಗಳ ಮೂಲಕ ಮತ್ತು ದೇಹದ ಮೂಲಕ. ತತ್ವಪದಕಾರರಲ್ಲಿ ದೇಹವು ಸಾಧನೆಯ ಸಾಧನವಾಗಿದೆ. ಇಲ್ಲಿ ದೇಹವೇ ಒಂದು ಸಂಭ್ರಮವಾಗಿದೆ. ಇದನ್ನೇ ಬಸವಣ್ಣನವರು ಕಾಯವೇ ಕೈಲಾಸವೆಂದು ಕರೆದಿದ್ದಾರೆ. ತತ್ವಪದಕಾರರಿಗೆ ಶ್ರಮ ಸಮಾನತೆಯೇ ಒಂದು ಸಾಧನವಾಗಿದೆ. ತತ್ವಪದಗಳು ಕೇವಲ ರಚನಾತ್ಮಕ ಪ್ರಕಾರಗಳಲ್ಲ, ಅವು ಜ್ಞಾನ ಮತ್ತು ಸಾಧನೆಗಳೆರಡನ್ನು ಏಕೀಭವಿಸುವ ಮಾಧ್ಯಮ. ಇದು ಬಹುಮುಖ್ಯವಾಗಿ ದೈವ ಮಾರ್ಗವಲ್ಲ ಗುರು ಮಾರ್ಗ, ಇಲ್ಲಿ ನಡೆ-ನುಡಿ ಒಂದಾಗದ ಅರಿವು ಅರಿವಲ್ಲ. ಗುರು ಮುಖೇನ ಲಭ್ಯವಾದ ಜ್ಞಾನ ಸ್ವಯವಾಗಲು ಸಾಧನೆ ಅತ್ಯಗತ್ಯ. ಈ ಸಾಧನೆಗೆ ದೇಹವನ್ನು ಕೇಂದ್ರವಾಗಿಟ್ಟುಕೊಂಡು ಅದಕ್ಕೆ ಅಂಟಿಕೊಳ್ಳದೆ ಅದರ ಹಂಗಿನಿಂದ ಹೊರಗೆ ಬರುತ್ತಾರೆ. ಮೂರ್ತ ರೂಪದ ಲೌಕಿಕ ಜಗತ್ತನ್ನು ನಿರಾಕರಿಸಿದ ಯಾವ ತಾತ್ವಿಕತೆಯನ್ನೂ ಅಲ್ಲಮನಾಗಲಿ, ಬಸವಣ್ಣನಾಗಲಿ, ಶಿಶುನಾಳ ಶರೀಫನಾಗಲಿ ಮತ್ತು ಇತರ ತತ್ವಪದಕಾರರಾಗಲಿ ಮಾನ್ಯ ಮಾಡುವುದಿಲ್ಲ. ಹಾಗಾಗಿ ಇಲ್ಲಿ ಸ್ತ್ರೀವಾದಿ ಚಿಂತನೆಗಳು, ಸ್ತ್ರೀ ಸಂವೇದನೆಗಳು ಕೂಡ ದೇಹ ಮೀಮಾಂಸೆಯ ಜೊತೆಗೇ ಸಾಗುತ್ತದೆ. ಹೆಣ್ಣಾಗಲಿ ಗಂಡಾಗಲಿ ದೇಹಾಪಮಾನದಿಂದ ಮುಕ್ತವಾಗಿ ಯೋಚಿಸುವ ಕ್ರಮವನ್ನು ಅನೇಕ ತತ್ವಪದಕಾರರು ಹೇಳಿದ್ದಾರೆ.

**“ಮುಡಚಟ್ಟಿನೊಳು ಬಂದು**
**ಮುಟ್ಟಿ ತಟ್ಟಿ ಅನುತೀರಿ**
**ಮುಡಚಿಟ್ಟು ಎಲ್ಲಾದ್ದೇಳಣ್ಣ ಮುಟ್ಟಾದ ಮೂರು ದಿನಕೆ**
**ಹುಟ್ಟಿ ಬಂದಿದಿ ನೀನು...”**[1]

ಕಡಕೋಳ ಮಡಿವಾಳಪ್ಪನ ಈ ತತ್ವಪದದಲ್ಲಿ ದೇಹದ ಮೇಲಿನ ಹಿಡಿತ ಸಾಧಿಸುವ ಎಲ್ಲ ಸಂಸ್ಥೆಗಳನ್ನು ಟೀಕೆಗೊಳಪಡಿಸಿದ್ದಾನೆ. ವೈದಿಕ ವ್ಯವಸ್ಥೆಯ ಕುತಂತ್ರಗಳಾದ ಲಿಂಗಭೇದ, ಪವಿತ್ರತೆಯ ಬಂಧನಗಳು, ದೇಹವನ್ನು ಕಾಲ್ಪನಿಕ ಆತ್ಮಕ್ಕೆ ಅರ್ಪಿಸುವ ವಿಚಾರಗಳು ತತ್ವಪದಕಾರರಿಗೆ ವ್ಯವಸ್ಥಿತ ಹುನ್ನಾರಗಳಂತೆ ಕಂಡಿವೆ. ಇವರಿಗೆ ಆತ್ಮದ ಔನ್ನತ್ಯದ ಸೋಗಿನಲ್ಲಿ ಮಾಡಿದ ದೇಹದ ಅಪಮಾನವು ಗಂಭೀರವಾಗಿ ಗೋಚರಿಸಲಿಲ್ಲ. ಮನುಕಲ್ಪನೆಯಲ್ಲಿ ಮೈಲಿಗೆ ಆದರೆ ಋತುಸ್ರಾವ ಫಲವಂತಿಕೆಯ ಸಂಕೇತವಾದ ಮುಟ್ಟು ಭೂಮಿಯ ಪಾಲಿಗೆ ನಿಸರ್ಗ ಸಹಜವಾಗಿ ಅದು ಎಲ್ಲಾ ಹುಟ್ಟಿನ ಸಾಧ್ಯತೆಯಾದ ಶೂನ್ಯತೆಯಾಗಿದೆ ಎಂಬ ವಿಚಾರವನ್ನು ಈ ಪದದಲ್ಲಿ ಕಾಣುತ್ತೇವೆ. ಸಂಭೋಗದ ಪ್ರತೀಕವೇ ಆಗಿರುವ ಉಳುಮೆಯಿಂದ ಪಡೆಯುವ ಅನ್ನವು ಭೂಮಿಯೆಂಬ ಹೆಣ್ಣಿನ ಕ್ಷೇತ್ರ ಭಿಕ್ಷೆ ಆಗಿರುವುದನ್ನು ಈ ಪದ ಸೂಚಿಸುತ್ತದೆ. ಶಾಸ್ತ್ರ ಪರಂಪರೆಯಲ್ಲಿ ಕಾವ್ಯ ಮೀಮಾಂಸೆ ಎಂದರೆ ಧ್ವನಿ, ರಸ, ಛಂದಸ್ಸು, ಅಲಂಕಾರಗಳಷ್ಟೇ ಮುಖ್ಯವಾಗಿದ್ದವು. ಆದರೆ ತತ್ವಪದಕಾರರ ದೃಷ್ಟಿಯಲ್ಲಿ ಮೀಮಾಂಸೆ ಎಂದರೆ ಅನ್ನ, ಹಸಿವು, ದೇಹ ಮತ್ತು ಕಾಯಕ ಹೀಗೆ ಕನ್ನಡದ ನಿಲುವನ್ನು

ಅರಿಯಲು, ಕನ್ನಡದ ಅಸ್ಮಿತೆಯನ್ನು ಗುರುತಿಸಲು ತತ್ವಪದಕಾರರು ಮತ್ತೆ ಮತ್ತೆ ವಚನ ಸಾಹಿತ್ಯದ ಬಾಗಿಲಿಗೆ ಹೋಗಿ ನಿಲ್ಲುವುದು ಕಂಡುಬರುತ್ತದೆ. ಶರಣರ ತತ್ವಾದರ್ಶಗಳೆಲ್ಲವೂ ತತ್ವಪದಕಾರರಿಗೆ ಹೊಸತಾಗಿ ಗೋಚರಿಸುತ್ತವೆ.

ತತ್ವಪದಕಾರರು ತಮ್ಮ ಕಾವ್ಯದಲ್ಲಿ ಲೌಕಿಕದ ಮಹೋನ್ನತಿಯನ್ನು ತಿಳಿಸಿದ ಹಾಗೆ ಸಂಸಾರದಲ್ಲಿ ಇದ್ದುಕೊಂಡು ಕೈವಲ್ಯ ಸಾಧಿಸಬೇಕು ಎಂಬುದು ಅನೇಕ ತತ್ವಪದಕಾರರ ಅಂಬೋಣ. ಸಂಸಾರದ ಮಾರ್ಗವನ್ನು ಅರಿತು ದೈವತ್ವದಿಂದ ಮಾನವತ್ವದ ಕಡೆಗೆ ಸಾಗಬೇಕು. ತತ್ವಪದಕಾರರಲ್ಲಿ ಗೃಹಸ್ಥರು, ಸಂಸಾರದಿಂದ ವಿಮುಖರಾದವರೂ ಕಂಡು ಬರುತ್ತಾರೆ. ಸಹಜವಾಗಿ ತತ್ವಪದಗಳು ಸಂಸಾರದ ಮಹತ್ವವನ್ನು, ನಿಸ್ಸಾರತೆಯನ್ನು, ಪ್ರಪಂಚ ವಿರಕ್ತಿಯನ್ನು, ಅನನ್ಯ ಜೀವನಪ್ರೀತಿಯನ್ನು ಸಾರುತ್ತವೆ. ತತ್ವಪದಕಾರರಲ್ಲಿ ಅನೇಕರು ವೈರಾಗ್ಯದ ಸಾಧಕರಾದ ಅವಧೂತ, ಆರೂಢ, ಸಿದ್ಧ, ಸೂಫಿ ಪರಂಪರೆಯವರಾಗಿದ್ದಾರೆ. ಮಾನವನಲ್ಲಿ ಸಂಸಾರ ಸುಖ, ಆಸಕ್ತಿಗಳು ಮತ್ತು ವ್ಯಾಮೋಹಗಳಿಂದ ಸಾಂಸಾರಿಕ ತಾಪತ್ರಯಕ್ಕೆ ಸಿಕ್ಕಿಹಾಕಿಕೊಳ್ಳುವುದು ಸಾಮಾನ್ಯವಾಗಿದೆ. ಸಂಸಾರದ ಹಂಗನ್ನು ತೊರೆದು, ಅಧಿಕಾರ ಚಾಪಲ್ಯಗಳನ್ನು ಬದಿಗೊತ್ತಿ ಸಾಧನ ಮಾರ್ಗ ಹಿಡಿಯಬೇಕೆಂಬುದು ತತ್ವಪದಕಾರರ ಮಹತ್ವದ ಚಿಂತನೆಯಾಗಿದೆ. ಆತ್ಮದ ಉನ್ನತಿಯನ್ನು ಸಾಧಿಸಲು ಭವಬಂಧನವನ್ನು ಬಿಡಿಸಿಕೊಂಡು ಕೈವಲ್ಯ ಬದುಕಿಗೆ ನಾಂದಿಯಾಗಬೇಕು. ನಿಜ ಜ್ಞಾನಿಯಾಗಿ ಲೌಕಿಕದ ಸ್ವಾರ್ಥ ಆಶಯಗಳನ್ನು ಬಿಟ್ಟು ಪಾರಮಾರ್ಥಿಕ ಸಾಧನೆಗೆ ಸದಾ ಹಂಬಲಿಸಬೇಕು. ಸಂಸಾರಕ್ಕೆ ಅಡಿಪಾಯವಾಗಿರುವುದು ಗಂಡು ಹೆಣ್ಣಿನ ವ್ಯಾಮೋಹ, ಆಕರ್ಷಣೆ ಹಾಗೂ ತನ್ನದೆಂಬ ಸ್ವಾರ್ಥ ಭಾವನೆ. ಇಂತಹ ಆಕರ್ಷಣೆಯನ್ನು ತೊಡೆದುಹಾಕಿ ವೈರಾಗ್ಯದ ಮಜಲಿಗೆ ಏರುವ ಅರಿವಿನ ಚಿಂತನೆ ಅವಶ್ಯವೆಂದು ಸಾರಿದ್ದಾರೆ.

**"ಸಾಕವ್ವ ಸಾಕು ಈ ಸಂಸಾರ ಸುಡಲಿನ್ಯಾರಿಗೆ ಬೇಕು**
**ಸಾಕವ್ವ ಸಾಕು**
**ಮಡದಿ ಮಕ್ಕಳು ಮನೆ ಒಡವೆಗಳೆಲ್ಲಾ**
**ಸುಡಲಿಡು ಯಾರದು ಎನಲಿಲ್ಲ**
**ಹಡೆದಂಥ ತಾಯ್ತಂದೆ ಬಳಗವು ಎಲ್ಲ**
**ಒಡಹುಟ್ಟಿದ ಅಣ್ಣ-ತಮ್ಮಂದಿರೆಲ್ಲ**
**ಬಿಡದೆ ಬಂದು ಯಮನನ್ನು ಜಡಿವಾಗ**
**ಎಡಬಲದಿ ನಿಂತು ಬರಿ ಮಿಡುಕುವನಲ್ಲ"[2]**

ಕೂಡಲೂರು ಬಸವಲಿಂಗಪ್ಪನವರು ಈ ತತ್ವಪದದಲ್ಲಿ ಸಂಸಾರದ ಕ್ಷಣಿಕತೆಯನ್ನು ವಿಶಿಷ್ಟವಾಗಿ ಹೇಳಿದ್ದಾರೆ. ಇಲ್ಲಿ ಸಂಸಾರದ ನಿರಸನವು ಜಾನಪದ ಧಾಟಿಯಲ್ಲಿ ಅತ್ಯಂತ ಆತ್ಮೀಯವಾಗಿ ಅಭಿವ್ಯಕ್ತಗೊಂಡಿದೆ. ಸಂಸಾರದ ಸುಖ ಸಾಕಾಗಿದ್ದು, ಇದು ಬೆಂಕಿ ಸುಡುವಂತೆ ತಮ್ಮನ್ನು ಸುಡುತ್ತಿದೆ ಎಂದು ಹೇಳಿದ್ದಾರೆ.

ಮನುಷ್ಯನು ಮರಣಿಸುವಾಗ ಅವನನ್ನು ಮನೆ, ಹೆಂಡತಿ, ಮಕ್ಕಳು, ಸಂಪತ್ತು ಯಾವುದು ಮರಣದಿಂದ ತಪ್ಪಿಸಲು ಸಾಧ್ಯವಿಲ್ಲ. ತಂದೆ ತಾಯಿ, ಅಣ್ಣ ತಮ್ಮ, ಬಂಧು ಬಳಗ ಎಲ್ಲವೂ ಮರುಗುವರು ಹೊರತು ಯಮನ ಕೈಯಿಂದ ತಪ್ಪಿಸಲು ಸಾಧ್ಯವಿಲ್ಲ. ಸ್ವಾರ್ಥದಿಂದ ಗಳಿಸಿದ ಸಂಪತ್ತು ನಶ್ವರವಾದದ್ದು. ಆಧ್ಯಾತ್ಮ ವಾದಿಗಳು ಸಂಸಾರ ಬಂಧನದಿಂದ ದೂರಾಗಬೇಕು ಎಂಬುದು ಬಸವಲಿಂಗಪ್ಪನವರ ತತ್ವಪದದ ಆಶಯವಾಗಿದೆ.

**"ಸಂಸಾರದ ಗೊಡವೆ ಇನ್ಯಾಕೆ ಇನ್ಯಾರಿಗೆ ಬೇಕೊ**
**ಭವಸಾಗರದೊಳು ಸಂಸಾರದ ಗೊಡವೆ ಇನ್ಯಾಕೆ**
**ನಮ್ಮ ನಾವು ತಿರುಗಿರಲು ಯಮ ತಾನು ಕೊಲುವಾಗ**
**ಒಂಟೆಯ ಮೇಲೆ ಹತ್ತಿದೆನವ್ವಾ ಹತ್ತಿ**
**ಘಂಟೆಯ ನುಡಿಸಿದೆ ನನ ತಾಯವ್ವ**
**ಕಂಟಕಗಳ ಪರಿಹರಿಸಿ ಸುಂಟರಗಾಳಿಯ ದಾಟಿ**
**ನಡೆದು ಮತ್ತೆಂಟು ಕೋಟೆಯ ಸಂಪೂರ್ಣ ಗೆದ್ದೆ"**[3]

ಶಿಶುನಾಳ ಶರೀಫರು ಈ ಪದ್ಯದಲ್ಲಿ ಲೌಕಿಕದ ಭವಬಂಧನಗಳ ಕುರಿತು ಮಾತನಾಡಿದ್ದಾರೆ. ಈ ಭವಬಂಧನಗಳು ಸಾಗರವಿದ್ದಂತೆ. ಇಲ್ಲಿ ಈಜಲೂ ಕಷ್ಟ ಇರಲೂ ಕಷ್ಟ. ಈ ಲೌಕಿಕದ ಗೊಡವೆ ತಮಗೆ ಬೇಡವೆಂದು ಹೇಳುತ್ತಾರೆ. ಶರೀಫರು ಆರೂಢರಾದರೂ ಸಂಸಾರದ ಸವಿಯನ್ನು ಉಂಡವರು. ಸಂಸಾರದಲ್ಲಿ ಇದ್ದುಕೊಂಡು ಅಧ್ಯಾತ್ಮವನ್ನು ಸಾಧಿಸಿದವರು. ಈ ಲೌಕಿಕದ ಬದುಕು ಮಾನಸಿಕ ಬಾಧೆಗೆ ಕಾರಣವಾಗುತ್ತದೆ. ಆದರೆ ಪಾರಮಾರ್ಥಿಕ ಚಿಂತನೆಯು ಮನಸ್ಸಿಗೆ ಮುದ ನೀಡುತ್ತದೆ. ಸಮಾಜದ ಮೌಢ್ಯಗಳು ಮನುಷ್ಯನ ಸುತ್ತಲೂ ಇವೆ. ಪಾರಮಾರ್ಥದ ಹಾದಿಯುದ್ದಕ್ಕೂ ಕಂಟಕಗಳಂತಿರುವ ಅಷ್ಟಮದಗಳಾದ ಧನ, ಕುಲ, ವಿದ್ಯೆ, ರೂಪ, ಯವ್ವನ, ಬಲ, ಪರಿವಾರ, ಅಧಿಕಾರ ಇವುಗಳನ್ನು ಗೆಲ್ಲಬೇಕು. ಇವು ಅಹಂಕಾರಕ್ಕೆ ಕಾರಣವಾಗುತ್ತದೆ. ಅಹಂಕಾರದ ಈ ಸಂಸಾರವನ್ನು ತೊರೆದು ಕೈವಲ್ಯವನ್ನು ಸಾಧಿಸುತ್ತ ಶಿಶುನಾಳಧೀಶನೆಂಬ ಪಾರಮಾರ್ಥದ ಚರಣದಲ್ಲಿ ಲೀನವಾಗಬೇಕು ಎಂಬುದು ಶರೀಫರ ಚಿಂತನೆಯಾಗಿದೆ.

12ನೆಯ ಶತಮಾನದ ಬಸವಾದಿ ಶಿವಶರಣರು ಮತ್ತು ದಾಸರು ಬೆಳೆಸಿದ ಮಾನವೀಯ ಮೌಲ್ಯಗಳ ಪರಂಪರೆಯನ್ನು 15ನೆಯ ಶತಮಾನದ ನಂತರದಲ್ಲಿ ಕೊಡೇಕಲ್ ಬಸವಣ್ಣನವರು ತಿಂಥಣಿಯ ಮೌನೇಶ್ವರರು, ಖ್ವಾಜಾ ಬಂದೇ ನವಾಜರು, ಬಕ್ಕಪಯ್ಯನವರು, ಕಡಕೋಳ ಮಡಿವಾಳಪ್ಪ, ಖೈನೂರ ಕೃಷ್ಣಪ್ಪ, ಕೂಡಲೂರು ಬಸವಲಿಂಗ ಶರಣರು, ಶಿಶುನಾಳ ಶರೀಫರ, ಸಾಮರಸ್ಯ, ಕೈವಾರ ಭ್ರಾತೃತ್ವ, ನಾರಾಯಣಪ್ಪ ಮೊದಲಾದ ಅನುಭಾವಿಗಳು ಸಮಾಜದಲ್ಲಿ ಸಾಮರಸ್ಯ, ಭ್ರಾತೃತ್ವ, ಗೌರವಗಳೊಂದಿಗೆ ಧಾರ್ಮಿಕ ಮತ್ತು ಸಾಂಸ್ಕೃತಿಕ ಸಮನ್ವಯತೆಯನ್ನು

ಸಾಧಿಸಲು ಪ್ರಯತ್ನಿಸಿದ್ದಾರೆ. ಸಾಮಾಜಿಕ ಅಸಮಾನತೆಯನ್ನು ಪ್ರಶ್ನಿಸುವ ರಚನೆಗಳನ್ನು ವಚನಕಾರರು ಬರೆದಂತೆ ತತ್ವಪದಕಾರರು ಹೆಚ್ಚು ಬರೆಯಲಿಲ್ಲ. ಆದರೆ ದೇಹದ ಬಗ್ಗೆ, ಮನಸ್ಸಿನ ಬಗ್ಗೆಯೇ ಪ್ರತಿರೋಧವನ್ನು ಒಡ್ಡಿದರು. ತಮ್ಮ ದೇಹ-ಮನಸ್ಸನ್ನು ಪರಿಶುದ್ಧವಾಗಿ ಇಟ್ಟುಕೊಳ್ಳಲು ಹೋರಾಟ ನಡೆಸುವುದು ಅವರ ಮೊದಲ ಕರ್ತವ್ಯವಾಗಿತ್ತು. ಈ ದೇಹವನ್ನು ಒಂದು ತೊಗಲಿನ ಚೀಲವೆಂದು ಮಾಂಸದ ಮುದ್ದೆಯೆಂದು ಭಾವಿಸುತ್ತಾರೆ. ಶೀಲ, ಮಡಿ ಮೈಲಿಗೆ ಮಾಡುವ ಜನರು ಹೊಲಸಿನಲ್ಲಿಯೇ ಹುಟ್ಟಿ ಬಂದಿದ್ದಾರೆಂದು ತತ್ವಪದಕಾರರು ಟೀಕಿಸುತ್ತಾರೆ. ತತ್ವಪದದಲ್ಲಿ,

**"ಜನ ಮೆಚ್ಚಿ ನಡೆದುಕೊಂಡರೇನುಂಟು ಲೋಕದಿ**
**ಮನ ಮೆಚ್ಚಿ ನಡೆದುಕೊಂಬುವುದೆ ಚೆಂದವು**
**ಜನರೇನು ಬಲ್ಲರು ಒಳಗಾಗೊ ಕೃತ್ಯವ**
**ಮನವರಿತು ಕಳ್ಳತನವಿಲ್ಲವಲ್ಲಾ"**[4]

ಇಡೀ ತತ್ವಪದದಲ್ಲಿ ಜನ ಮತ್ತು ಮನಗಳ ಮುಖಾಮುಖಿಯಿದೆ. ಜನ ಮೆಚ್ಚಿಸುವವನು ಶಿವನ ಮೆಚ್ಚಿಗೆಗೆ ಪಾತ್ರನಾಗಲಾರನು. ಸತ್ಯವೆಂಬುದು ಮನುಷ್ಯನ ಒಳಗಿರುತ್ತದೆಯೇ ಹೊರತು ಹೊರಗಿರುವುದಿಲ್ಲ. ಮನುಷ್ಯ ತನ್ನನ್ನು ವಂಚಿಸಿಕೊಳ್ಳುವಷ್ಟು ಬೇರೆಯವರನ್ನು ವಂಚಿಸುವುದಿಲ್ಲ. ಜನಮೆಚ್ಚಿಗೆಯನ್ನು ಮನುಷ್ಯ ಗಳಿಸಬಹುದು. ತನ್ನ ಮನ ಮೆಚ್ಚುವಂತೆ ಮಾಡಿಕೊಳ್ಳುವುದು ಕಷ್ಟ. ಮರುಕುಂದಿ ಬಸವಣ್ಣಪ್ಪ 'ಮನ ತೊಳೆದು ನೋಡುವುದು ಮಹಾಜ್ಞಾನ' ಎಂದಿದ್ದಾನೆ. ತನ್ನ ದೇಹ-ಮನಸ್ಸಿನ ವಿರುದ್ಧ ಹೋರಾಟ ನಡೆಸುವ ಮಾದರಿ ತತ್ವಪದಗಳಲ್ಲಿ ಸಿಗುತ್ತದೆ.

**"ಹೆಣ್ಣಿನ ಹೊಟ್ಟಿಲಿ ಹುಟ್ಟಾರಿವರು**
**'ಮಾ' ಅಂತ ಕರಿತಾರಿವರು**
**ಮುಟ್ಟಾಗ್ಯಾಳಂತ ದೂರ ಹಾಕಿ**
**ಮ್ಯಾಲಿಂದೆಲ್ಲಾ ಕಟ್ಟಾರಿವರು ॥ಪ॥**
**ಎದೆಯ ಹಾಲ ಕುಡದಾರಿವರು**
**ಬುದ್ದಿಯಿಲ್ಲಂತ ಜರಿತಾರಿವರು**
**ತಿದ್ದಿ ತೀಡಿ ಬೆಳೆಸಿದಕ್ಕಾಗಿ**
**ಕಿಮ್ಮತ್ತಿಲ್ಲದೆ ನುಡಿತಾರಿವರು"**[5]

ಈ ತತ್ವಪದವು ಬಸವಕಲ್ಯಾಣದ ಫೈಮುದಾ ಫಾತಿಮಾ ರಚಿಸಿದ್ದಾಳೆ. ಹೆಣ್ಣನ್ನು ಅವಳ ಮುಟ್ಟಿನ ಕಾರಣವಾಗಿ ದೂರವಿಡುವ ಅನಿಷ್ಠ ಪದ್ಧತಿಯನ್ನು ಫೈಮುದಾ ಖಾರವಾಗಿಯೇ ಪ್ರಶ್ನಿಸುತ್ತಾಳೆ. ಪುರುಷ ಪ್ರಧಾನ ಸಮಾಜವು ಹೆಣ್ಣನ್ನು ಕೇವಲ ಹಾಸಿಗೆಗೆ ಮತ್ತು ಮಕ್ಕಳನ್ನು ಹೆರುವುದಕ್ಕೆ ಬಳಸಿಕೊಂಡು ಬಿಸಾಡುವ ಅಮಾನವೀಯತೆ

ಯಾರನ್ನಾದರೂ ಕೆರಳಿಸದೇ ಇರದು. ಮುಟ್ಟಿನ ಸಮಯದಲ್ಲಿ ಹೆಣ್ಣು ಮಕ್ಕಳೊಂದಿಗೆ ಮನೆಯವರು ನಡೆದುಕೊಳ್ಳುತ್ತಿದ್ದ ರೀತಿ, ನೀತಿಗಳು ಇವಳನ್ನು ಘಾಸಿಗೊಳಿಸುತ್ತವೆ. ಅಡುಗೆ ಮನೆ, ಬಾಣಂತಿ ಕೋಣೆಗಳಿಗೆ ಸೀಮಿತಗೊಳಿಸಿ ಅಕ್ಷರಶಃ ಬಂದಿಖಾನೆ ಯಲ್ಲಿಟ್ಟಂತೆ ನಡೆಸಿಕೊಳ್ಳುವುದನ್ನು ಇವಳು ಖಂಡಿಸುತ್ತಾಳೆ. ಹಾಗೇ ನೋಡಿದರೆ ಈಕೆ ಎತ್ತಿದ ಪ್ರಶ್ನೆಗಳು ಇಂದಿನ ಸ್ತ್ರೀವಾದಿ ಚಿಂತಕಿಯರಿಗೆ ಹೊಸದೇನು ಅನಿಸಲಿಕ್ಕಿಲ್ಲ. ಆದರೆ ಸ್ತ್ರೀವಾದಿ ಚಳವಳಿ, ಹೋರಾಟ, ಸಾಮಾಜಿಕ ನ್ಯಾಯ ಇತ್ಯಾದಿ ಆಧುನಿಕ ಕಾಲಘಟ್ಟದ ವಿದ್ಯಮಾನಗಳ ಪರಿಚಯವೂ ಇರದ ಸ್ಥಿತಿಯಲ್ಲಿ ಬಾಳಿದ ಘಾತಿಮಾನಂಥವರು ಇವುಗಳನ್ನು ಕೇಳುವುದಿದೆಯಲ್ಲ? ಇದು ತುಂಬಾ ಮುಖ್ಯವಾದ ಸಂಗತಿ. ಘಾತಿಮಾ ಕೇಳುವ ಎಲ್ಲ ಪ್ರಶ್ನೆಗಳು ನೈಸರ್ಗಿಕ ನ್ಯಾಯದ ತಳಹದಿಯ ಮೇಲೆ ಸೃಷ್ಟಿಯಾಗಿವೆ.

ಹೀಗೆ ತತ್ವಪದಕಾರರು ಸಮಾಜದ ಅನೇಕ ವಿದ್ಯಮಾನಗಳನ್ನು ಕಂಡು ವಿಡಂಬಿಸುತ್ತಲೇ ಲೋಕ ಹಿತ ಬಯಸುತ್ತಾರೆ. ಈ ವಿಡಂಬನೆ ಮೂಲಕ ತಮ್ಮ ಕಾಲದ ರಾಜಕೀಯ, ಧಾರ್ಮಿಕ, ಸಾಮಾಜಿಕ ವ್ಯವಸ್ಥೆಗಳ ಜೊತೆ ಅವರು ಮುಖಾಮುಖಿಯಾಗಿದ್ದಾರೆ. ಆಳುವ ವ್ಯವಸ್ಥೆಯೇ ಇರಲಿ, ಪ್ರಬಲವಾದ ಧಾರ್ಮಿಕ ಶಕ್ತಿಗಳೇ ಇರಲಿ, ಬಲಿಷ್ಠವಾದ ಸಾಮಾಜಿಕ ಶಕ್ತಿಯೇ ಇರಲಿ, ಸರಿ ಕಾಣದ್ದನ್ನು ನಿಷ್ಠುರವಾಗಿ ಖಂಡಿಸುವುದು ಅವರ ಜಾಯಮಾನವಾಗಿದೆ. ತತ್ವಪದಕಾರರ ಮುಖ್ಯ ಉದ್ದೇಶ ಅನುಭಾವದ ಮೂಲಕ ಆತ್ಮೋದ್ಧಾರವನ್ನು ಮಾಡಿಕೊಳ್ಳುವುದಾಗಿತ್ತು. ಆಧ್ಯಾತ್ಮಿಕ ಸಾಧನೆಯೇ ಅವರ ಪರಮಗುರಿಯಾಗಿದ್ದರೂ ಸಹ, ಸಮಾಜದಲ್ಲಿನ ಮೂಢನಂಬಿಕೆ, ಅನಿಷ್ಟ ಪದ್ಧತಿಗಳು, ಜಾತೀಯತೆ, ಅಸ್ಪೃಶ್ಯತೆ ಮುಂತಾದವುಗಳನ್ನು ಖಂಡಿಸಿ ತತ್ವಪದಗಳನ್ನು ರಚಿಸಿದರು. ಜನಸಾಮಾನ್ಯರಿಗೆ ಸಮಾನತೆ, ಬದುಕಿನ ನಶ್ವರತೆ, ಕಾಯಕನಿಷ್ಠೆ ಅಂತರಂಗ ಶುದ್ಧಿ ಮಾನವೀಯ ಮೌಲ್ಯಗಳು ಮುಂತಾದವುಗಳನ್ನು ನೀತಿಬೋಧೆಗಳ ಮೂಲಕ ಬೋಧಿಸಿದರು.

ಕನ್ನಡದ ಪ್ರಾಚೀನ ಕೃತಿಯಾದ ಕವಿರಾಜ ಮಾರ್ಗದಲ್ಲಿ ಬರುವ 'ಕಸವರಮೆಂಬುದು ನೆಲೆ ಸೈರಿಸಲಾರ್ಪೊಡೆ ಪರಧರ್ಮಂ, ಪರ ವಿಚಾರಮಂ' ಎನ್ನುವ ಮಾತು, ಅಂದಿನ ಕನ್ನಡಿಗರ ಸಹೃದಯ ಭಾವನೆ ಹಾಗೂ ಧರ್ಮಸಹಿಷ್ಣು ಜೀವನದ ದೃಷ್ಟಿಯನ್ನು ಬಿಂಬಿಸುತ್ತದೆ. ಹಾಗೂ ಅನಂತರದ ಕನ್ನಡಿಗರು ನೀಡುವಂತಹದ್ದು ಆಗಿದೆ.

ಭಾರತವು ಬಹು ಸಂಸ್ಕೃತಿಗಳ ದೇಶ, ಭಿನ್ನ ಸಮುದಾಯಗಳು, ಭಿನ್ನ ಜನಾಂಗಗಳು, ಭಿನ್ನ ಸಂಸ್ಕೃತಿಗಳನ್ನೊಳಗೊಂಡ ನಾಡು. ಇಲ್ಲಿ ಧರ್ಮಗಳಿವೆ ಯಾದರೂ ಜನಸಾಮಾನ್ಯರು ಯಾವೊಂದು ಧರ್ಮಕ್ಕೆ ಗಂಟುಬೀಳದೆ ಎಲ್ಲಾ

ಧರ್ಮಗಳ ಒಳಿತನ್ನು ತಮ್ಮ ಬದುಕಿಗೆ ಬಳಸಿಕೊಂಡವರು. ಧರ್ಮದ ಕುರಿತು ಇಲ್ಲಿಯವರೆಗೆ ವೈದಿಕರು ನಂಬಿಸಿದ ಅನೇಕ ನಂಬಿಕೆಗಳನ್ನು ಶರಣರು, ಕೀರ್ತನಕಾರರು, ತತ್ವಪದಕಾರರು ವಿರೋಧಿಸಿದರು. ಅವುಗಳಿಗೆ ಅರ್ಥವೇ ಇಲ್ಲವೆಂದು ಪ್ರತಿಪಾದಿಸಿದರು. ಬಸವಣ್ಣ ಧರ್ಮದ ತಿರುಳನ್ನು 'ದಯವಿಲ್ಲದ ಧರ್ಮವಾವುದಯ್ಯ? ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ; ದಯವೇ ಧರ್ಮದ ಮೂಲವಯ್ಯಾ' ಎಂದು ಅದರ ಮಹತ್ವವನ್ನು ಎತ್ತಿಹೇಳಿದರು. ಅಸ್ಪೃಶ್ಯರನ್ನು ಆ ಕಾಲದಲ್ಲಿ ಗುಡಿಯೊಳಗೆ ಬಿಟ್ಟುಕೊಳ್ಳುತ್ತಿರಲಿಲ್ಲ. ಅಂತಹವರನ್ನು ಕರೆದು ಸಂತೈಸಿದರು. 'ಉಳ್ಳವರು ಶಿವಾಲಯವ ಮಾಡುವರು ನಾನೇನು ಮಾಡುವೆ? ಬಡವನಯ್ಯ, ಎನ್ನ ಕಾಲೇ ಕಂಭ, ದೇಹವೇ ದೇಗುಲ, ಶಿರಹೊನ್ನ ಕಳಸವಯ್ಯ, ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಎಂದರು. ಇದನ್ನೇ ಶರೀಫರು

**"ಗುಡಿಯ ನೋಡಿರಣ್ಣಾ ದೇಹದ**
**ಗುಡಿಯ ನೋಡಿರಣ್ಣಾ,**
**ಗುಡಿಯ ನೋಡಿರದ**
**ಪೊಡವಿಯೊಡೆಯನು**
**ಅಡವಿಕೊಂಡು ಕಡು ಬೆಡಗಿನೊಳಿರುತಿಹ"**[6]

ಎಂದ ಶರೀಫರು ದೇಹವನ್ನೇ ಗುಡಿಯನ್ನಾಗಿ, ಮಸೀದಿಯನ್ನಾಗಿ ಮಾಡಿಕೊಂಡು ಬಾಹ್ಯದ ಗುಡಿ ಮಸೀದಿಯನ್ನು ನಿರಾಕರಿಸಿದರು.

ಡಾಂಭಿಕ ಆಚರಣೆಗಳು ಮನುಷ್ಯನನ್ನು ಎಷ್ಟು ಆವರಿಸಿಕೊಂಡಿದೆ ಎಂಬುದನ್ನು ವಚನಕಾರರು ಹೀಗೆ ಹೇಳುತ್ತಾರೆ. 'ವೇದವೆಂಬುದು ಓದಿನ ಮಾತು, ಶಾಸ್ತ್ರವೆಂಬುದು ಸಂತೆಯ ಸುದ್ದಿ, ಪುರಾಣವೆಂಬುದು ಪುಂಡರ ಗೋಷ್ಠಿ' ಎಂದು ಪುರೋಹಿತಶಾಹಿಯ ವ್ಯವಸ್ಥೆಯನ್ನು ವಿರೋಧಿಸಿದ್ದಾರೆ. ವಚನಕಾರರಿಂದ ಪ್ರಭಾವಿತರಾದ ಅನುಭಾವಿಗಳು ಪುರೋಹಿತಶಾಹಿಯ ಆಚರಣೆಗಳನ್ನು ಟೀಕಿಸಿದ್ದಾರೆ. ಚಿದಾನಂದಾವಧೂತರು ತಮ್ಮ ತತ್ವಪದದಲ್ಲಿ ವೇದ, ಪುರಾಣಗಳನ್ನು ನಿರಾಕರಿಸಿದ್ದಾರೆ. ಆ ತತ್ವಪದವು ಈ ಕೆಳಗಿನಂತೆ ಅವಲೋಕಿಸಬಹುದು.

**"ವೇದ ಬೇಡ ನಿನಗೆ ಶಾಸ್ತ್ರ ಬೇಡ**
**ಗೋಧಿಕಾಳಿನಷ್ಟು ಭಕ್ತಿಯಿದ್ದರೆ ಸಾಕು**
**ಆವಾವ ಉಪವಾಸ ಬೇಡ ಅಡವಿ ಸೇರಬೇಡ**
**ಕಾವಿ ಕಮಂಡಲ ಧರಿಸಲು ಬೇಡ"**

ಧರ್ಮದ ಹೆಸರಿನಲ್ಲಿ ಆಚರಿಸುತ್ತಾ ಬಂದಿರುವ ನಮ್ಮ ಅನೇಕ ಸಂಪ್ರದಾಯಗಳು, ಆಚರಣೆಗಳು, ಕಾಲದ ತುಳಿತದಲ್ಲಿ ಅಳಿಯದೆ ಉಳಿದು ಬಂದಿರುವುದರಿಂದ ನಾವು ಅವುಗಳನ್ನು ಇಂದಿಗೂ ಮೌಲ್ಯಗಳೆಂದೇ ಗುರುತಿಸುತ್ತೇವೆ. ಆದರೆ ಇಂತಹ ಸಂಪ್ರದಾಯಗಳು ಉಳಿದುಬರಲು ನಿಜವಾದ ಕಾರಣ, ನಮ್ಮಲ್ಲಿ

ಭಯ ಮತ್ತು ಮೌಢ್ಯ. ಈ ವಿಚಾರದಲ್ಲಿ ತತ್ವಪದಕಾರರು ಆಧುನಿಕರಿಗಿಂತಲೂ ಅತಿ ಆಧುನಿಕರಾಗಿ ಕಾಣುತ್ತಾರೆ. ಪುರೋಹಿತ ವ್ಯವಸ್ಥೆಯಲ್ಲಿ ಬೆಳೆದು ಬಂದ ಅನೇಕ ಅಂಧಶ್ರದ್ಧೆಗಳನ್ನು ತತ್ವಪದಕಾರರು ವಿರೋಧಿಸಿರುತ್ತಾರೆ. ಅವೈದಿಕ ಹಲವು ಧಾರೆಗಳು ಒಂದೆಡೆ ಸೇರಿಕೊಂಡು ಪುರೋಹಿತಶಾಹಿಯ ಎಲ್ಲ ಅಮಾನವೀಯ ವರ್ತನೆಯನ್ನು ತೀವ್ರವಾಗಿ ವಿರೋಧಿಸಿದವು. ಅದರ ಮಿತಿಗಳ ಎದುರಿನಲ್ಲಿ ಪರ್ಯಾಯ ಸಂಸ್ಕೃತಿಯನ್ನು ಹುಟ್ಟಿಹಾಕುವ ಕೆಲಸವನ್ನು ತತ್ವಪದಕಾರರು ಮಾಡಿದರು. ಹಿಂದೂ ಮತ್ತು ಇಸ್ಲಾಂನ ಪುರೋಹಿತಶಾಹಿ ವ್ಯವಸ್ಥೆಯ ಬಗ್ಗೆ ತಿಳಿದುಕೊಳ್ಳುವುದನ್ನು ತತ್ವಪದಕಾರರಲ್ಲಿ ಕಾಣಬಹುದು.

12ನೇ ಶತಮಾನದ ಶರಣರ ಮತ್ತು 16 ರಿಂದ 19ನೇ ಶತಮಾನದವರೆಗಿನ ತತ್ವಪದಕಾರರಲ್ಲಿ ಭಕ್ತಿ ಮತ್ತು ಆಧ್ಯಾತ್ಮ ಸಾಮಾಜಿಕ ಕಾಳಜಿಯಾಗಿದೆ. ತತ್ವಪದಗಳು ಸಾಹಿತ್ಯ ಮತ್ತು ಸಂಗೀತದ ಕಲೆಯಾಗಿ ಅಷ್ಟೇ ಅಭಿವ್ಯಕ್ತಗೊಳ್ಳುವುದಿಲ್ಲ, ಅವು ಮಾನವ ಕುಲದ ಸಾಮೂಹಿಕ ಮತ್ತು ಸಾಮಾಜಿಕ ಕಾಳಜಿಯಾಗಿ ಪ್ರಕಟಗೊಳ್ಳುತ್ತವೆ. ಅಂದಂದಿನ ಕಾಲ, ಸಂದರ್ಭ, ಪರಿಸರಕ್ಕೆ ಅನುಗುಣವಾಗಿ ಅಲ್ಲಿಯ ಜೀವನ ಕ್ರಮಕ್ಕೆ ಮುಖ್ಯವೆನಿಸುವಂತಹ ಜನಪದರೇ ರೂಪಿಸಿಕೊಂಡ ಸಮುದಾಯ ನಿಯಮಗಳು ಅಂದಂದಿನ ಕಾಲಕ್ಕೆ ಜೀವನ ಮೌಲ್ಯಗಳೆನಿಸುತ್ತವೆ. ಜೀವನ ವಿಧಾನಗಳು, ಬದುಕಿನ ರೀತಿ ನೀತಿಗಳು, ಸಾಮಾಜಿಕ ಕಾಳಜಿಗಳು ಮೊದಲಾದವುಗಳು ಅಂದಂದಿನ ಸಾಂಸ್ಕೃತಿಕ ಪರಂಪರೆಯಲ್ಲಿ ಕಾಣುತ್ತೇವೆ. ಇವುಗಳ ಮೂಲಕ ಜೀವನ ಮೌಲ್ಯಗಳು ಅಭಿವ್ಯಕ್ತಗೊಳ್ಳುವವು. ಈ ಜೀವನಾದರ್ಶಗಳು ಮತ್ತು ಮೌಲ್ಯಗಳು ಆಧ್ಯಾತ್ಮಿಕ ರೂಪವನ್ನು ಪಡೆದುಕೊಂಡಿವೆ. ತತ್ವಪದಕಾರರಿಗೆ ಪ್ರಾಪಂಚಿಕ ಮತ್ತು ಪಾರಮಾರ್ಥಿಕ ಭಿನ್ನವಾಗಿರದೆ ಅವು ಒಂದೇ ಆಗಿವೆ. ಆದ್ದರಿಂದ ಅವರು ಲೌಕಿಕ ಸನ್ನಿವೇಶ, ಘಟನೆ ಮತ್ತು ವಸ್ತುಗಳ ಮೂಲಕ ಲೌಕಿಕ ಮತ್ತು ಅಲೌಕಿಕ ಮೌಲ್ಯಗಳನ್ನು ಆಧ್ಯಾತ್ಮದ ನೆಲೆಯಲ್ಲಿ ಬೋಧಿಸಿದರು.

**"ಎಂಥಾ ಮೋಜಿನ ಕುದುರಿ ಹತ್ತಿದ ಮ್ಯಾಲೆ**
**ತಿರುಗುವುದು ಹನ್ನೊಂದು ಫೇರಿ**
**ಹಚ್ಚನ್ನ ಕರಡ ಹಾಕಲಿಬೇಕೋ**
**ನಿಚ್ಚಳ ನೀರ ಕುಡಿಸಲಿಬೇಕೋ**
**ಸಂಸ್ಕಾರ ಕಮಚೀಲಿ ಹೊಡಿಯಲಿಬೇಕೋ**
**ಅಚ್ಯುತ ಮೆಚ್ಚುವಂತೆ ಮೈ ತಿಕ್ಕಬೇಕೋ..."**[7]

ಈ ತತ್ವಪದದಲ್ಲಿ ಶರೀಫರು ಕುದುರೆಯ ರೂಪಕವನ್ನು ಬಹಳ ಪರಿಣಾಮಕಾರಿಯಾಗಿ ಬಳಸುತ್ತಾರೆ. ಇಲ್ಲಿ ಕುದುರೆಯ ಬಗೆಗೆ ನಿಗೂಢತೆ ಇದೆ. ಕುದುರೆ ಎನ್ನುವುದು ಪದದುದ್ದಕ್ಕೂ ದ್ವಂದ್ವವಾಗಿಯೇ ಉಳಿಯುತ್ತದೆ. ಕೊನೆಯ ಎರಡು ಸಾಲುಗಳಲ್ಲಿ ಕುದುರೆ ಯಾವುದೆಂದು ತಿಳಿಯುತ್ತದೆ. ಅದು ಒಂದು ಮೋಜಿನ

ಕುದುರೆಯಾಗಿದೆ. ಅದನ್ನು ಹತ್ತಿದ ಮೇಲೆ ಹನ್ನೊಂದು ಸುತ್ತು ಸುತ್ತುತ್ತಿರುತ್ತದೆ. ಈ ಕುದುರೆಗೆ ದಿನಾಲು ಹಚ್ಚನ್ನ ಹುಲ್ಲು ಹಾಕಿ ನೀರು ಕುಡಿಸಬೇಕು. ಶರೀಫರು ಈ ಮೋಜಿನ ಕುದುರೆಯನ್ನು ಸಂಸ್ಕಾರದ ಚಾಟಿಯಲ್ಲಿ ಹೊಡೆಯುತ್ತಾರೆ. ಆಗ ಅದು ಮೇಗಲ ಓಣಿಯಲ್ಲಿ (ಆಧ್ಯಾತ್ಮದ ನೆಲೆಯಲ್ಲಿ ಅಥವಾ ಸಹಸ್ರಾರ ಭಾಗದಲ್ಲಿ) ಓಡುತ್ತಿದೆ ಮತ್ತು ಸಂಭ್ರಮಿಸುತ್ತಿದೆ.

ಭಕ್ತಿಯ ಮಾರ್ಗವು ಸರಳ ಮತ್ತು ಸುಲಭವಾಗಿದೆ. ಆಧ್ಯಾತ್ಮ ಸಾಧನೆಯಲ್ಲಿ ಭಕ್ತಿಗೆ ವಿಶಿಷ್ಟವಾದ ಸ್ಥಾನವಿದೆ. ಈ ಸಾಧನೆಯ ಕೊನೆಯ ಗುರಿಯಾದ ಕೈವಲ್ಯವನ್ನು ಸಾಧಿಸಲು ಈ ಮಾರ್ಗ ಪರಿಣಾಮಕಾರಿಯಾಗಿದೆ. ಮೋಕ್ಷಕ್ಕೆ ಕಾರಣವಾಗುವ ಭಕ್ತಿಯು ಜ್ಞಾನ ಮತ್ತು ಧರ್ಮ ಸಾಧನೆಯಲ್ಲಿ ಬಹು ಮುಖ್ಯವಾದುದಾಗಿದೆ. ಚಿತ್ತ ಶುದ್ಧಿಯಿಂದ ಮಾತ್ರ ಜ್ಞಾನವನ್ನು ಪಡೆದುಕೊಳ್ಳಲು ಸಾಧ್ಯ. ಭಕ್ತ ಮತ್ತು ಭಕ್ತಿಗಳೆರಡು ಪರಮಾತ್ಮನಿಂದ ಭಿನ್ನವಾದುದಲ್ಲ. ಇದರಲ್ಲಿ ಯಾವುದೇ ಧರ್ಮ, ಜಾತಿ, ಕುಲ, ವರ್ಗ, ಜನಾಂಗ, ದೇಶ, ಕಾಲ ಮೊದಲಾದವುಗಳ ಕಟ್ಟು ವಿಧಿ ನಿಯಮಗಳಿಲ್ಲ. ತತ್ವಪದಕಾರರು ಭಕ್ತಿಯನ್ನು ಗರ್ಭಗುಡಿಯಿಂದ ಬಯಲಿಗೆ ತಂದರು. ಬಯಲು ತತ್ವವನ್ನು ಬೋಧಿಸಿದರು. ದೇವರನ್ನು ಧ್ಯಾನ ಮತ್ತು ಹಾಡುಗಳ ಮೂಲಕ ಪಡೆಯ ಬಯಸಿದರು. ತನ್ನ ತಾ ಅರಿತುಕೊಂಡು ಸಂಪೂರ್ಣವಾಗಿ ತನ್ನನ್ನು ತಾನು ಅರ್ಪಿಸಿಕೊಳ್ಳುವುದು ಭಕ್ತಿಯ ಲಕ್ಷಣವಾಗಿದೆ. ತತ್ವಪದಕಾರರ ಭಕ್ತಿಯು ವಿಶಿಷ್ಟವಾದುದಾಗಿದೆ ಮತ್ತು ಅದು ದೇಶಿಯ ಶೈಲಿಯಲ್ಲಿ ಅಭಿವ್ಯಕ್ತಗೊಂಡಿದೆ. ಭಕ್ತಿ ಪಂಥದ ಪ್ರವರ್ತಕರಾದ ಶರಣರು ಮತ್ತು ದಾಸರಂತೆ ಧರ್ಮದ ಚೌಕಟ್ಟಿನಲ್ಲಿಟ್ಟು ಸಾಧನೆ ಮಾಡಿದವರಲ್ಲ. ತತ್ವಪದಕಾರರು ಧರ್ಮದ ಸಿದ್ಧಾಂತಕ್ಕೆ ಕಟ್ಟು ಬೀಳದೆ ಅತೀತವಾದ ಆತ್ಮೋನ್ನತಿಗೆ ಹಂಬಲಿಸಿದವರು. ವೈದಿಕ, ವೀರಶೈವ ಮತ್ತು ಮುಸ್ಲಿಂ ಧರ್ಮಗಳ ಒಡನಾಡಿಗಳಾದ ತತ್ವಪದಕಾರರಿಗೆ ಧರ್ಮಗಳಲ್ಲಿರುವ ಜಿಜ್ಞಾಸೆಗಿಂತ ನೇರವಾಗಿ ಕೈವಲ್ಯ ಸಾಧಿಸುವ ದೈವತ್ವದೊಳಗಿನ ಭಕ್ತಿ ಇವರದ್ದಾಗಿದೆ. ತತ್ವಪದಕಾರರ ಬಹುತೇಕ ತತ್ವಪದಗಳು ಭಕ್ತಿಯ ನೆಲೆಗಟ್ಟಿನ ಮೇಲೆಯೇ ರಚನೆಯಾಗಿವೆ. ಇವರ ತತ್ವಪದಗಳ ಜೀವಸೆಲೆಯಾದ ಭಕ್ತಿಯು ವಿವಿಧ ರೂಪದಲ್ಲಿ ದೈವ ಪ್ರೀತಿಯಾಗಿ ಸಮರ್ಪಿತಗೊಳ್ಳುವುದನ್ನು ಕಾಣುತ್ತೇವೆ.

**"ಎಲ್ಲಿ ಭಕ್ತಿ ಎಲ್ಲಿ ಮುಕ್ತಿ ಈ ಮೂಢ ಜನರಿಗೆ**
**ಎಲ್ಲಿ ಭಕ್ತಿ ಎಲ್ಲಿ ಮುಕ್ತಿಯಣ್ಣ**
**ಬ್ರಹ್ಮಜ್ಞಾನಿ ಇರುವೆವು ನಾವೆಂದು**
**ನುಡಿದಂತೆ ನಡೆದಿರುವೆವೆಂದು**
**ಒಂದು ಬಿಡದೆ ಮನಸ್ಸಿಗೆ ತಂದು ಎಲ್ಲಾ ತಿಳಿದಿಹೆವೆಂದು ಹೇಳುವ**
**ಜನರಿಗೆ ಗಡ್ಡ ಬಿಟ್ಟು ಮಡ್ಡಿ ಕಡಿದು**
**ವಡ್ಡ ಕೊರವರಂತೆ ತಾವು**

**ಅಡ್ಡಿಯಿಲ್ಲದೆ ಒದರಿಕೋತ**
**ತಿರುಗುವಂತಹ ಮನುಜರಿಗೆ..”[8]**

ದೇವದುರ್ಗದ ಆದಿ ಅಮಾತೆಪ್ಪನ ಈ ತತ್ವಪದದಲ್ಲಿ ಸ್ವಾರ್ಥ ಮೂಲವಾದ ಭಕ್ತಿಯಿಂದ ಮುಕ್ತಿ ದೊರೆಯುವುದು ಅಸಾಧ್ಯ ಎಂದು ಹೇಳಿದ್ದಾನೆ. ಈ ಮೂಢಜನರು ಸ್ವಾರ್ಥಸಾಧನೆಯಿಂದ ಭಕ್ತಿಯನ್ನು ಆಚರಿಸುವುದು ಸಾಧ್ಯವಿಲ್ಲವೆಂದು ಹೇಳಿದ್ದಾನೆ. ಅಮಾತೆಪ್ಪನ ಕಾವ್ಯದ ಮೂಲಸೆಲೆ ಭಕ್ತಿಯಾಗಿದೆ. ಭಕ್ತಿಯ ನೆಲೆಗಟ್ಟಿನ ಮೇಲೆ ಈ ಪದವನ್ನು ಹಾಡಿದ್ದಾನೆ. ತತ್ವಪದಕಾರರಲ್ಲಿ ಭಕ್ತಿಯು ವಿವಿಧ ರೂಪದ ಉತ್ಕಟ ಪ್ರೀತಿಯಾಗಿ ಮೈದೋರಿ ದೇವರಲ್ಲಿ ಅರ್ಪಿತವಾಗುವುದನ್ನು ಅವರ ಅನೇಕ ಪದಗಳಲ್ಲಿ ಕಾಣುತ್ತೇವೆ. ಇವರ ಪದಗಳು ಕೇವಲ ಭಕ್ತಿಯನ್ನು ಬೋಧಿಸದೆ ಅನನ್ಯ ಜೀವನ ಪ್ರೀತಿಯನ್ನು ಸಾರುತ್ತವೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮಹಿಳೆಯರ ಕುರಿತಾದ ಅನೇಕ ಕಾವ್ಯಗಳು ಶಾಸ್ತ್ರಗ್ರಂಥಗಳು ರಚನೆಯಾದವು. ವಚನಕಾರರು, ಕೀರ್ತನಕಾರರು, ತತ್ವಪದಕಾರರು ಮಹಿಳಾ ಪರವಾದ ನಿಲುವುಗಳನ್ನು, ಮತ್ತು ಧೋರಣೆಗಳನ್ನು ತತ್ವಪದದ ಮೂಲಕ ಅಭಿವ್ಯಕ್ತಿಸಿದ್ದಾರೆ. ಸಮಾಜದಲ್ಲಿ ಮಹಿಳೆಯರು ಪುರುಷನಷ್ಟೇ ಸಮಾನವಾದ ಅವಕಾಶಗಳನ್ನು ಪಡೆಯಬೇಕಾಗಿತ್ತು. ಆದರೆ ಧರ್ಮದ, ಆರ್ಥಿಕತೆಯ, ಲಿಂಗ ರಾಜಕಾರಣಗಳಂತಹ ತಾರತಮ್ಯದಿಂದ ಸಿಗಬೇಕಾದ ಹಕ್ಕುಗಳು ಸಿಗದೇ ಹೋದವು. ಆಯಾ ಸಮಾಜದ ಪ್ರಗತಿಪರ ಮನಸ್ಸುಗಳು ಈ ಸಮಾನತೆಯ ಹಕ್ಕುಗಳ ಬಗ್ಗೆ ಕವಿಗಳು ಕೆಲವೊಮ್ಮೆ ಪ್ರತಿರೋಧವನ್ನು ವ್ಯಕ್ತಪಡಿಸುತ್ತಾ ಬಂದಿದ್ದಾರೆ. ಹೆಣ್ಣಿನ ದೇಹ ಸೌಂದರ್ಯವನ್ನು ನಾನಾ ರೂಪಕಗಳಿಂದ ಬಣ್ಣಿಸಿದ್ದಾರೆ. ಕೃತಿಯ ಪ್ರತೀಕ ಎಂದು ಕರೆದು ಆಕೆಯನ್ನು ಆರಾಧಿಸಿದ್ದಾರೆ. ಒಟ್ಟಾರೆ ಅವಳ ಬೌದ್ಧಿಕ ಹಾಗೂ ಮಾನಸಿಕ ಸ್ವರೂಪದ ಚಿತ್ರಣವನ್ನು ಕಟ್ಟಿಕೊಡುವಲ್ಲಿ ಸೋಲುತ್ತಾರೆ. ಇದಕ್ಕೆ ಕಾರಣ ಮಾನವ ಸಮಾಜದಲ್ಲಿ ಗಂಡು-ಹೆಣ್ಣು ಎಂಬ ಲಿಂಗರಾಜಕಾರಣದಿಂದ. ಧರ್ಮಶಾಸ್ತ್ರಗಳ ಮೂಲಕ ಕಟ್ಟುಪಾಡುಗಳನ್ನು ಹೆಣ್ಣಿನ ಮೇಲೆ ವಿಧಿಸಿದ್ದರು. ರಾಮಾಯಣ, ಮಹಾಭಾರತ ಮಹಾಕಾವ್ಯಗಳಲ್ಲಿ ಸ್ತ್ರೀಯು ತಾಯಿಯಾಗಿ ಮಾತ್ರ ಗೌರವ ಸ್ಥಾನ ಪಡೆದಿದ್ದಾಳೆ. ಜೈನ ಮತ್ತು ಬೌದ್ಧ ಧರ್ಮಗಳ ಆದಿಯಾಗಿ ಬಹುತೇಕ ಧರ್ಮಗಳಲ್ಲಿ ಮಹಿಳೆ ಪುರುಷನ ಅಧೀನಳಾಗಿದ್ದಾಳೆ. 12ನೇ ಶತಮಾನದಲ್ಲಿ ಶರಣರು ನಡೆಸಿದ ಸಾಮಾಜಿಕ ಕ್ರಾಂತಿಯಿಂದ ತುಳಿತಕ್ಕೊಳಗಾದ ಮಹಿಳೆಯರಿಗೆ, ದಲಿತರಿಗೆ, ಶ್ರಮಿಕರಿಗೆ ಸಾಮಾಜಿಕ ಸ್ಥಾನಮಾನಗಳನ್ನು ನೀಡಲು ಯತ್ನಿಸಿದರು. ಕ್ರಿ. ಶ. 17 ರಿಂದ 19ನೇ ಶತಮಾನದಲ್ಲಿದ್ದ ತತ್ವಪದಕಾರರು ಜಾತಿ, ಮತ, ಧರ್ಮಗಳನ್ನು ಮೀರಿ ಬದುಕಿದವರು. ಆದರೆ ತತ್ವಪದಕಾರರು ವಚನಕಾರರಂತೆ ಮಹಿಳೆಯರ ಅಸ್ಮಿತೆಯ ಕುರಿತು ಖಚಿತವಾಗಿ ಬರೆಯಲಿಲ್ಲ. ಏಕೆಂದರೆ ಈ ಕಾಲಘಟ್ಟದಲ್ಲಿ ಹಲವಾರು ಪಂಥಗಳು ತತ್ವಪದಕಾರರ ಮೇಲೆ ಪ್ರಭಾವ ಬೀರಿರುವ ಕಾರಣ, ತಮ್ಮ ವೈಯಕ್ತಿಕ

ಅಭಿಪ್ರಾಯಗಳನ್ನು ಮತ್ತು ತಾವು ಅನುಭವಿಸಿದ ಸತ್ಯವನ್ನು ತಿಳಿಸಿದರು. ಕೆಲವು ತತ್ವಪದಕಾರರಿಗೆ ಹೆಣ್ಣು, ಹೊನ್ನು, ಮಣ್ಣು ಮಾಯೆಯಾಗಿ ಕಾಡಿದರೆ ಇನ್ನೂ ಅನೇಕ ತತ್ವಪದಕಾರರು ಸಂಸಾರದಲ್ಲಿದ್ದುಕೊಂಡು ಅನುಭಾವಿಕ ಸಾಧನೆಯನ್ನು ಮಾಡಿದವರೂ ಇದ್ದಾರೆ.

**"ಬ್ಯಾಸರಾದ ಸಂಸಾರಕ್ಕೆ ಕಡಿಗಿ ಮಾಡಿ**
**ಏಸೋ ದಿವಸ ಆಯಿತು ಇವನ ಸಂಗಡ ಕೂಡಿ**
**ತುಸು ಸುಖ ಕಾಣಲಿಲ್ಲ ದೈವಾ ಕೋಡಿ**
**ಗಂಟ ಬಿದ್ದಾನವ್ವಾ ಕೆಟ್ಟ ತಾಸೀಲಗೇಡಿ ॥1॥**
**ಎನಗೆ ಬಿಟ್ಟು ಮಾಡಿಕೊಂಡ ಪೋರಿಗಿ ನೋಡಿ**
**ವ್ಯರ್ಥವಾಗಿ ಹೊಯ್ತೆ ತಾಯಿ ಎಷ್ಟು ಮಾಡಿ**
**ಶಿವದಾಸ ಹೇಳಿದಾರೆ ಸತ್ಯದ ನುಡಿ**
**ಗಂಡಸ ಜಾತಿಯ ನಂಬಬೇಡರಿ ನಂಬಿಕೆ ಮಾಡಿ"[9]**

ಈ ತತ್ವಪದವು ಭೂತಾಳೆ ಶಿಲ್ಲಪ್ಪನದಾಗಿದೆ. ಮದುವೆಯಾಗಿ ಬಹಳ ವರ್ಷವಾದರೂ ಗಂಡನಿಂದ ಸಿಗಬೇಕಾದ ಪ್ರೀತಿ, ಮಮತೆ, ಸುಖ ಕಾಣದ ಹೆಣ್ಣೊಬ್ಬಳ ದುಃಖದ ಮಾತುಗಳು ಭೂತಾಳೆ ಶಿಲ್ಲಪ್ಪ ಮಹಿಳಾ ಪ್ರತಿನಿಧಿಯಾಗಿ ಪುರುಷ ಪ್ರಭುತ್ವದ ವಿರುದ್ಧ ಮಾತನಾಡುತ್ತಾನೆ. ದುಡಿಮೆ ಇಲ್ಲದೆ ಗಂಡನು ಹೆಂಡತಿ ದುಡಿದ ಹಣದಿಂದ ಹೆಂಡ ಕುಡಿದು, ಜೀವನ ಸಾಗಿಸುವ ಪ್ರವೃತ್ತಿಗೆ ತೆಗೆದುಕೊಂಡಿದ್ದಾನೆ. ಕುಡುಕ ಗಂಡ ಕೊಡುವ ದೈಹಿಕ ಹಿಂಸೆಯನ್ನು ತಾಳಲಾರದೆ ಅವಳು ಮನಸ್ಸಿನಲ್ಲಿಯೇ ಶಪಿಸುತ್ತಾಳೆ. ಹೆಣ್ಣಿನ ಯೌವ್ವನ ತೀರಿದ ಮೇಲೆ ಮತ್ತೊಬ್ಬಳನ್ನು ಮದುವೆಯಾಗುವ. 'ಈ ಗಂಡಸ ಜಾತಿಗೆ ನಂಬಬೇಡಿರಿ' ಎನ್ನುವಲ್ಲಿ ಆತಂಕದ ಭಾವನೆಯು ಕಾಣುತ್ತದೆ. ಹೆಣ್ಣು ಗಂಡಿನ ನಡುವಳಿಕೆಯನ್ನು ಬೇಸರದ ನುಡಿಗಳ ಜೊತೆಗೆ ಗಂಡು ಜಾತಿಯಲ್ಲಿನ ಲಿಂಗ ರಾಜಕಾರಣವನ್ನು ಈ ತತ್ವಪದದಲ್ಲಿ ವಿಡಂಬಿಸಲಾಗಿದೆ. ಇಲ್ಲಿ ತತ್ವಪದಗಳನ್ನು ಗಮನಿಸಿದಾಗ ತಿಳಿದು ಬರುವ ವಿಷಯವೆಂದರೆ, ಕನ್ನಡ ತತ್ವಪದಕಾರರ ಮಹಿಳಾ ಸಂವೇದನೆಯ ಸ್ವರೂಪವು ದ್ವಂದ್ವಾತ್ಮಕ ನೆಲೆಗಳಲ್ಲಿ ಸಿಲುಕಿ, ಏಕ ಅಭಿಪ್ರಾಯವನ್ನು ನೀಡುವಲ್ಲಿ ಹಿನ್ನಡೆಯನ್ನು ಅನುಭವಿಸಿದಂತೆ ತೋರುತ್ತದೆ. ಇದಕ್ಕೆ ಮುಖ್ಯ ಕಾರಣವೆಂದರೆ ಮಹಿಳೆಯ ವಿಷಯದಲ್ಲಿ ಸಾಂಪ್ರದಾಯಿಕ, ವೈದಿಕ ಪುರೋಹಿತಶಾಹಿಯ ನಿಲುವುಗಳನ್ನು ತತ್ವಪದಕಾರರು ತಾಳಿರುವುದೇ ಕಾರಣ. ಅಂತಹ ಮಿತಿಗಳಿಂದ ಪಾರಾಗುವ ಪ್ರಯತ್ನಗಳು ವಾತಾವರಣದಲ್ಲಿ ಸಂವಾದಮಯವಾಗಿ ಸೀಮಿತವಾಗಿತ್ತು. ಬೆಳೆದಂತಹ ಶಿಶುನಾಳ ಶರೀಫ, ಕಡಕೋಳ ಮಡಿವಾಳಪ್ಪ ಮೊದಲಾದವರು ಜನಪದ ನಂಬುಗೆಯ ವಾತಾವರಣದಲ್ಲೇ ಇದ್ದರೂ ಬಹುಪಾಲು ತತ್ವಪದಕಾರರಿಗೆ ಸಾಮಾಜಿಕ ವಚನಕಾರರ ಹಾಗೆ ಪರಿಸರವು ಇರಲಿಲ್ಲ. ಹೀಗಾಗಿ ತತ್ವಪದಕಾರರು ವಚನಕಾರರ ಹಾಗೆ ಘನವಾದ ಮಹಿಳಾ ಸಂವೇದನೆಯನ್ನು

ಕಟ್ಟಿಕೊಳ್ಳಲು ಸಾಧ್ಯವಾಗಿಲ್ಲ.

**ಕೊನೆ ಟಿಪ್ಪಣಿಗಳು:**

1. ಮೀನಾಕ್ಷಿ ಬಾಳಿ (ಸಂ), (2017), ಕಡಕೋಳ ಮಡಿವಾಳಪ್ಪ ಮತ್ತು ಶಿಷ್ಯರ ತತ್ವಪದಗಳು, ಸಂಪುಟ-3, ರಾಷ್ಟ್ರೀಯ ಸಂತ ಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ, ಬೆಂಗಳೂರು, ಪು.ಸಂ. 166
2. ಶಾಸ್ತ್ರಿಮಠ ಎಂ.ಜಿ., (1987), ಕೂಡಲೂರು ಬಸವಲಿಂಗ ಶರಣರು: ಒಂದು ಅಧ್ಯಯನ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪು.ಸಂ. 25
3. ಶಿವಾನಂದ ಗುಬ್ಬಣ್ಣನವರ (ಸಂ), (2002), ಶಿಶುನಾಳ ಶರೀಫ ಗೀತೆಗಳು, ಅಕ್ಷಯ ಪ್ರಕಾಶನ, ಧಾರವಾಡ, ಪು.ಸಂ. 174
4. ಮಹಾಂತೇಶ ಶಾಸ್ತ್ರಿಗಳು (ಸಂ), (1976), ಕೈವಲ್ಯ ಕಲ್ಪವಲ್ಲರಿ, ಪಿ.ಸಿ ಶಾಬಾದಿಮಠ ಬುಕ್ ಡಿಪೋ, ಗದಗ, ಪು.ಸಂ. 118
5. ಅದೇ, ಪು.ಸಂ. 163
6. ಲಕ್ಷ್ಮೀನಾರಾಯಣ ಭಟ್ಟ ಎನ್.ಎಸ್. (ಸಂ), (2017), ಶಿಶುನಾಳ ಶರೀಫ ಸಾಹೇಬರ ಗೀತೆಗಳು, ಸಪ್ನ ಬುಕ್ ಹೌಸ್, ಬೆಂಗಳೂರು, ಮುನ್ನುಡಿ
7. ಅದೇ, ಪು.ಸಂ. 45
8. ಬಸವರಾಜ ಸಬರದ (ಸಂ), (2000), ಹೈದರಾಬಾದ್ ಕರ್ನಾಟಕದ ತತ್ವಪದಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ. 151
9. ಅದೇ, ಪು.ಸಂ. 206

## ಪರಾಮರ್ಶನ ಗ್ರಂಥಗಳು:


1. ಬಸವರಾಜ ಸಬರದ (ಸಂ), (2000), ಹೈದರಾಬಾದ್ ಕರ್ನಾಟಕದ ತತ್ವಪದಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
2. ಲಕ್ಷ್ಮೀನಾರಾಯಣ ಭಟ್ಟ ಎನ್.ಎಸ್. (ಸಂ), (2017), ಶಿಶುನಾಳ ಶರೀಫ ಸಾಹೇಬರ ಗೀತೆಗಳು, ಸಪ್ನ ಬುಕ್ ಹೌಸ್, ಬೆಂಗಳೂರು.
3. ಗುಂಡೂರು ಎಸ್.ವಿ. ಪಾಟೀಲ್, (2000), ಅವಧೂತ ಚಕ್ರವರ್ತಿ ಹೇರೂರು ವಿರುಪನಗೌಡರು, ಪಿ.ಸಿ. ಶಾಬಾದಿಮಠ ಬುಕ್ ಡಿಪೋ, ಗದಗ.
4. ನಾಗರಾಜ ಡಿ.ಆರ್. (ಲೇ), ಅಗರಹಾರ ಕೃಷ್ಣಮೂರ್ತಿ (ಸಂ), (2002), ಸಂಸ್ಕೃತಿ ಕಥನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
5. ಚಂದ್ರಪ್ರಭ, (2020), ತಂಗಿ ನಿನ್ನ ತಂಬೂರಿ (ಶರೀಫರ ತತ್ವ ಭಾಷ್ಯ ), ಅಜಬ್ ಪಬ್ಲಿಕೇಶನ್, ನಿಪ್ಪಾಣಿ.
6. ಮೀನಾಕ್ಷಿ ಬಾಳಿ (ಸಂ), (2017), ಕಡಕೋಳ ಮಡಿವಾಳಪ್ಪ ಮತ್ತು ಶಿಷ್ಯರ ತತ್ವಪದಗಳು, ಸಂಪುಟ–3, ರಾಷ್ಟ್ರೀಯ ಸಂತ ಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ, ಬೆಂಗಳೂರು.
7. ಶಾಸ್ತ್ರಿಮಠ ಎಂ.ಜಿ., (1987), ಕೂಡಲೂರು ಬಸವಲಿಂಗ ಶರಣರು: ಒಂದು ಅಧ್ಯಯನ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
8. ಶಿವಾನಂದ ಗುಬ್ಬಣ್ಣನವರ (ಸಂ), (2002), ಶಿಶುನಾಳ ಶರೀಫ ಗೀತೆಗಳು, ಅಕ್ಷಯ ಪ್ರಕಾಶನ, ಧಾರವಾಡ.
9. ಮಹಾಂತೇಶ ಶಾಸ್ತ್ರಿಗಳು (ಸಂ), (1976), ಕೈವಲ್ಯ ಕಲ್ಪವಲ್ಲರಿ, ಪಿ.ಸಿ ಶಾಬಾದಿಮಠ ಬುಕ್ ಡಿಪೋ, ಗದಗ.


10. ಬಸವರಾಜ ಸಬರದ (ಸಂ), (2000), ಹೈದರಾಬಾದ್ ಕರ್ನಾಟಕದ ತತ್ವಪದಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.